166

# ಕರ್ನಾಟಕ ವಿಧಾನ ಪರಿಷತ್

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಸಿ ಕೊಂಡಯ್ಯ ರವರ ನಿಯಮ-72 ರಡಿಯಲ್ಲಿ ನೀಡಿರುವ ಸಭಾ ಸೂಚನಾ ಪತ್ರ ಸಂಖ್ಯೆ:166ಗೆ ಉತ್ತರ.

### ವಿಷಯ:

ಬಳ್ಳಾರಿ ಮಹಾನಗರಪಾಲಿಕೆಯ ಒಳಚರಂಡಿ ವಿಭಾಗದಲ್ಲಿ ಕಳೆದ 15-20 ವರ್ಷಗಳಿಂದ ಒಳಚರಂಡಿ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿರುವವರನ್ನು 2011ರಲ್ಲಿ ಒಳಚರಂಡಿ ಪೌರಕಾರ್ಮಿಕರೆಂದು ಪರಿಗಣಿಸಿದ ಸರ್ಕಾರ 2012ರಲ್ಲಿ ಒಳಚರಂಡಿ ಸಹಾಯಕರೆಂದು ಪರಿಗಣಿಸಿರುವುದರಿಂದ ಇವರು ಯಾವುದೇ ಸೌಲಭ್ಯಗಳಿಲ್ಲದೆ ವಂಚಿತರಾಗಿರುತ್ತಾರೆ. ಸರ್ಕಾರ ಪೌರಕಾರ್ಮಿಕರಿಗೆ ಮಾತ್ರ ಸೇವಾ ಭದ್ರತೆ ದೃಷ್ಟಿಯಿಂದ ನೇಮಕ ಮಾಡಿದ್ದು, ಅದೇ ಮಾದರಿಯಲ್ಲಿ ಬಳ್ಳಾರಿ ಮಹಾನಗರಪಾಲಿಕೆಯ ಒಳಚರಂಡಿ ವಿಭಾಗದಲ್ಲಿ ಖಾಲಿ ಇರುವ 90 ಹುದ್ದೆಗಳಿಗೆ ಒಳಚರಂಡಿ ಸಹಾಯಕರನ್ನು ನೇಮಕ ಮಾಡಿ ಸೇವಾ ಭದ್ರತೆ ಒದಗಿಸಿ ಆದೇಶ ಹೊರಡಿಸಬೇಕೆನ್ನುವ ವಿಷಯವನ್ನು ನಿಯಮ 72ರ ಅಡಿಯಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

### ಉತ್ತರ:

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಳ್ಳಾರಿ ಇವರಿಂದ 82 ಯು.ಜಿ.ಡಿ. ಕಾರ್ಮಿಕರ ಸೇವೆಯನ್ನು ಸುಮಾರು 15 ವರ್ಷಗಳಿಂದ ಪಡೆಯಲಾಗುತ್ತಿದ್ದು, ದಿನಾಂಕ:01.07.2017ರಂದು ಒಳಚರಂಡಿ ನಿರ್ವಹಣೆಯನ್ನು ಬಳ್ಳಾರಿ ಮಹಾನಗರಪಾಲಿಕೆಗೆ ಹಸ್ತಾಂತರಗೊಳಿಸಲಾಗಿರುತ್ತದೆ. ಮುಂದುವರೆದು ಮಹಾನಗರ ಪಾಲಿಕೆಗಳ ವೃಂದ ಮತ್ತು ನೇಮಕಾತಿ ನಿಯಮಗಳು-2011 ರನ್ವಯ ಒಟ್ಟು 99 ಯು.ಜಿ.ಡಿ. ಹೆಲ್ಪರ್ಸ್ ಹುದ್ದೆಯು ಮಂಜೂರಾಗಿದ್ದು, ನೇರ ನೇಮಕಾತಿಯಡಿ ಹುದ್ದೆ ಭರ್ತಿಯಾಗದೇ ಇರುವುದರಿಂದ ಹೊರಗುತ್ತಿಗೆ ಆಧಾರದ ಮೇಲೆ ಯು.ಜಿ.ಡಿ. ಹೆಲ್ಪರ್ಸ್‌ಗಳ ಸೇವೆಯನ್ನು ಪಡೆಯಲು ಕಲ್ಪಿಸಿರುವಂತೆ, ಬಳ್ಳಾರಿ ಮಹಾನಗರಪಾಲಿಕೆಗೆ ಅವಶ್ಯವಿರುವ 90 ಒಳಚರಂಡಿ ಸಹಾಯಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದ್ದು, ಕಾರ್ಮಿಕ ಇಲಾಖೆಯಿಂದ ನಿಗಧಿಪಡಿಸಿರುವಂತೆ ಕನಿಷ್ಠ ವೇತನದನ್ವಯ ಮೂಲವೇತನ-ರೂ.14040 ಹಾಗೂ ವಿಡಿಎ ರೂ.2121.60 ಒಟ್ಟು ರೂ.16161.60/-ಗಳನ್ನು ಮತ್ತು ಇ.ಎಸ್.ಐ., ಇ.ಪಿ.ಎಫ್‌ಗಳನ್ನು ನಿಯಮಾನುಸಾರ ಪಾವತಿಸಲಾಗುತ್ತಿರುವುದಾಗಿ ಹಾಗೂ ಬೆಳಗಿನ ಉಪಹಾರ, ಸುರಕ್ಷಾ ಪರಿಕರಗಳಾದ ಗಮ್ ಶೂಸ್, ರಿಫ್ಲೆಕ್ಟಿವ್ ಜಾಕೆಟ್ಸ್, ಹ್ಯಾಂಡ್ ಗ್ಲೌಸ್, ಮಾಸ್ಕ್, ಸೋಪ್ ಹಾಗೂ ಸ್ಯಾನಿಟೈಜರ್‌ಗಳನ್ನು ನೀಡಲಾಗುತ್ತಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 20 ಪಿ.ಎನ್.ಜಿ. 2018 ದಿನಾಂಕ:16.01.2019 ರಂತೆ ಎಸ್.ಎಫ್.ಸಿ. ಮುಕ್ತನಿಧಿ ಹಾಗೂ ನಗರ ಸ್ಥಳೀಯ ಸಂಸ್ಥೆ ನಿಧಿಯ ಶೇ.24.10 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನರ ಕಲ್ಯಾಣ ಕಾರ್ಯಕ್ರಮದಡಿ ಶೇ.20ರಷ್ಟು ಅನುದಾನವನ್ನು ಕಡ್ಡಾಯವಾಗಿ ಪೌರಕಾರ್ಮಿಕರ/ ಸ್ವಚ್ಛತಾ ಕಾರ್ಯಕರ್ತರ ಕಲ್ಯಾಣಕ್ಕೆ ಮೀಸಲಿಡಲು

--2

ಕ್ರಮವಹಿಸಿ, ಸದರಿ ಅನುದಾನವನ್ನು ಆರೋಗ್ಯ ತಪಾಸಣೆ, ವೈದ್ಯಕೀಯ ವೆಚ್ಚ, ಸುರಕ್ಷಾ ದಿರಿಸುಗಳು, ಅಗತ್ಯವಾದ ನಿವೇಶನ ಖರೀದಿ ಹಾಗೂ ಮನೆ ನಿರ್ಮಾಣಕ್ಕೆ ಸಹಾಯಧನ ನೀಡುವ ಕಾರ್ಯಕ್ರಮಗಳಿಗೆ ಬಳಸಲು ಅವಕಾಶ ಕಲ್ಪಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಕ್ರಿಯವಾಗಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಸಿಬ್ಬಂದಿಗಳ ಕಲ್ಯಾಣಕ್ಕೆ ಸರ್ಕಾರವು ಹೆಚ್ಚು ಒತ್ತು ನೀಡಿದ್ದು, ಇವರ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಮತ್ತು ಆರೋಗ್ಯ ರಕ್ಷಣೆಯ ಹಿತದೃಷ್ಟಿಯಿಂದ ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಪ್ರಥಮ ಆದ್ಯತೆ ನೀಡಿ ಸೌಲಭ್ಯಗಳನ್ನು ಕಲ್ಪಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ರಾಜ್ಯದ ಮಹಾನಗರಪಾಲಿಕೆಗಳಲ್ಲಿ ಖಾಲಿಯಿರುವ ಲೋಡರ್ಸ್, ಕ್ಲೀನರ್ಸ್ ಮತ್ತು ಯುಜಿಡಿ ಹೆಲ್ಪರ್ಸ್‌ಗಳ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಕಡತ ಸಂಖ್ಯೆ: ನಅಇ 34 ಎಬಿಸಿ 2021 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು